ಚಡಪಡಿಸುತ್ತಿದ್ದಳು. ಹತ್ತಿಕ್ಕಿ ಕೊನೆಗೊಮ್ಮೆ ಈ ರೂಪದಲ್ಲಿ ಸ್ಫೋಟವಾಯಿತು. ನನ್ನ ಗಂಡ ದೇವರು. ಅವರಿಗೆ ನಾನು ಅರ್ಹ ಹೆಂಡತಿಯಲ್ಲ ಎಂಬುದೇ ಅವಳ ಅಂತರಂಗದ ಕೊರಗು..."

"ನಾನೆಷ್ಟು ಸಲ ಹೇಳಿದ್ದೀನಿ ಸರ್... ಜನಗಳ ಮಾತಿಗೆ ಕಿವಿಗೊಡಬೇಡಾ... ಎಲ್ಲದಕ್ಕೂ ನಾನಿದ್ದೀನಿಂತ ಎಷ್ಟು ಬಾರಿ ಹೇಳಿದರೂ 'ಹೂಂ' ಅಂತ ತಲೆಯಾಡಿಸುತ್ತಿದ್ದಳು. ಇಷ್ಟು ಚಿಕ್ಕ ವಿಷಯವನ್ನು ಅದೆಷ್ಟು ಗಾಢವಾಗಿ ತೆಗೆದುಕೊಂಡು ಬಿಟ್ಟಿದ್ದಾಳೆ ನೋಡಿ..." ಮುಖ ಚಿಕ್ಕದು ಮಾಡಿ ಹೇಳುತ್ತಿದ್ದ.

"ಯೂ ಆರ್ ಗ್ರೇಟ್ ಮಿಸ್ಟರ್ ದಿವಾಕರ್. ನಿಮ್ಮ ತರಹದ ವಿಶಾಲ ಹೃದಯ ಯಾರಿಗಿದೆ ಹೇಳಿ... ಜಾತಿ, ಸಂಬಂಧ... ಸಂಪ್ರದಾಯಗಳು ನಮ್ಮ ಅನುಕೂಲಕ್ಕಾಗಿ ಮಾಡಿಕೊಂಡಿದ್ದೇವೆಯೇನೋ ಅನ್ನಿಸುತ್ತೆ... ಅಲ್ವಾ?..." ಪ್ರೊಫೆಸರರು ದಿವಾಕರನನ್ನು ಮೆಚ್ಚುಗೆಯಿಂದ ನೋಡಿದರು.

"ನಾನಲ್ಲ ಸರ್, ನೀವು ನಮ್ಮಂತಹವರ ನೋವುಗಳನ್ನು ಸದ್ದಿಲ್ಲದೆ ನಿವಾರಿಸಿ ಕಳುಹಿಸುವ ನೀವು ಸರ್ ದೊಡ್ಡವರು. ಪುನಃ ಬರ್ಬೇಕಾ?"

"ಊಹೂಂ... ಪದೇ ಪದೇ ಬರೋದು ಬೇಡ. ಒಂದು ತಿಂಗಳು ನಾನು ಕೊಟ್ಟಿರುವ ಮಾತ್ರೆ ಕೊಡಿ. ಸಾಕು. ಫೋನು ಮಾಡಿ ತಿಳಿಸಿ.. ಅವಶ್ಯಕತೆಯಿದ್ದರೆ ಬರುವಿರಂತೆ..."

ದಿವಾಕರ ಕೃತಜ್ಞತೆಯಿಂದ ಮತ್ತೊಮ್ಮೆ ನಮಸ್ಕರಿಸಿ ಹೊರಟ. ಅವನ ನಡಿಗೆಯಲ್ಲೀಗ ಉತ್ಸಾಹ... ಲವಲವಿಕೆ ತುಂಬಿತ್ತು.

ಹಿಂದೆಯೇ ವಿಜಯಾ ನುಗ್ಗಿ ಬಂದಳು.

"ನೀವು ಹೇಳಿದ್ದು ತಪ್ಪು... ಮೈದುನನ್ನೇ ಮದ್ವೆಯಾಗಿದ್ದಾಳೆ ಸರೀಂತಾ ಹೇಳ್ತೀರಲ್ಲ..." ಕೇಸ್ ಪೇಪರುಗಳನ್ನು ಮೇಜಿನ ಮೇಲೆ ಟಪ್ಪೆಂದು ಇಡುತ್ತಾ ಹೇಳಿದಳು.

ತಿಳಿಯಾಗಿ ನಕ್ಕ ಪ್ರೊಫೆಸರ್ ರಾವ್. "ನೀನಿನ್ನೂ ಚಿಕ್ಕವಳು. ಸಂಬಂಧಗಳ ಬಗ್ಗೆ ನಿಂಗೇನು ಗೊತ್ತು? ಆ್ಞಂ?..."

"....."

"ನಾವಿರೋದು ಜಡ್ಜ್‌ಮೆಂಟ್ ಕೊಡೋಕಲ್ಲ, ಅಷ್ಟಕ್ಕೂ ಅವರದು ತಪ್ಪು ಸರೀಂತಾ ಹೇಳಲು ನಾವ್ಯಾರು? ನಾವು ಪರಿಪೂರ್ಣರೆ?..."

"ಸರ್..."

"ಬದುಕಿನ ದ್ವಂದ್ವದಲ್ಲಿ ಬಳಲಿ ನೊಂದು, ನಿವಾರಣೆ ಕಾಣದೆ ತೊಳಲುತ್ತಾ ನಮ್ಮ ಬಳಿ ಬರ್ತಾರೆ. ಬದುಕುವ ಅದಮ್ಯ ಆಸೆಯಿಟ್ಟುಕೊಂಡು, ಇತ್ತ ಬದುಕಲಾರದೆ, ಅತ್ತ ಸಾಯಲಾರದೆ, ಮಾನಸಿಕವಾಗಿ ಬಳಲಿ, ಉನ್ಮಾದರಾಗಿ ಬರುವವರಿಗೆ 'ನೀನು ಪಾಪಿ... ಮಾಡಿದ್ದು ತಪ್ಪು... ನೀನು ಬದುಕಲು ಅರ್ಹನಲ್ಲ... ನಿಂಗೆ ಹಕ್ಕಿಲ್ಲ...' ಎಂದು ಹೇಳಬೇಕೆ?..."

"....."

"ಅಷ್ಟಕ್ಕೂ ಗೀತಾಳದ್ದು ಏನು ತಪ್ಪಿದೆ? ಮನೆ, ಸಮಾಜ... ಜಾತಿ ಎಲ್ಲವನ್ನೂ ಧಿಕ್ಕರಿಸಿ, ನಾಗರಾಜ ಹೇಳಿದ ಹಾಗೆ, ಸೂತ್ರದ ಬೊಂಬೆಯಂತೆ ಕುಣಿದು, ಅವನಿಂದ ತಿರಸ್ಕೃತಳಾಗಿ. ಹೆದರಿ ಹತಾಶಳಾಗಿ ಸಾಯಲು ಹೊರಟವಳನ್ನು ದಿವಾಕರ ಬದುಕಿಸಿದ್ದು ತಪ್ಪೆ? ಹೆಣ್ಣನ್ನು ಒಂದು ವಸ್ತುವಿನಂತೆ ಭೋಗಿಸಿ ತಿಪ್ಪೆಗೆ ಬಿಸಾಡಿ ಹೋದ. ಅವನ ಮುಖಕ್ಕೆ ರಾಚುವಂತೆ ಎಲ್ಲಿಂದಲೋ ಬಂದ ದಿವಾಕರ ಅವಳಿಗೆ ಮಾನದಾನ, ಪ್ರಾಣ ದಾನ ಮಾಡಿದ್ದು ಅಪರಾಧವೆ?"